ಸಂರಕ್ಷಣೆ ಕಾಯ್ದೆ 1980ರ ಪ್ರಕಾರ ಅನುಮೋದನೆ ನೀಡಲು ಕಳುಹಿಸಿಕೊಡಲಾಗಿದೆ.

ಆ) ಅರಣ್ಯ ಜಮೀನಿನ ಬಿಡುಗಡೆ ಸಂಬಂಧಿಸಿದ ಪ್ರಸ್ತಾವನೆ ಸಿದ್ದಗೊಳಿಸುವ ಮುನ್ನ ಬೆಂಗಳೂರು ವೃತ್ತದ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ತುಮಕೂರು ಕಾರ್ಯನಿರ್ವಾಹಕ ಅಭಿಯಂತರರ ಮಧ್ಯ ಅಗತ್ಯ ಮಾಹಿತಿಗಳನ್ನು ಪಡೆಯಲು ಪತ್ರ ವ್ಯವಹಾರ ನಡೆದು ಪ್ರಸ್ತಾವನೆ ಸಿದ್ದಗೊಳಿಸಲು ವಿಳಂಬವಾಗಿರುತ್ತದೆ. ಸರ್ಕಾರಕ್ಕೆ ಪ್ರಸ್ತಾವನೆ ಬಂದ ನಂತರ ಮೇಲೆ ತಿಳಿಸಿದಂತೆ ಈಗಾಗಲೇ ಕ್ರಮ ತೆಗೆದುಕೊಳ್ಳಲಾಗಿದೆ.

ಇ) ಕೇಂದ್ರ ಸರ್ಕಾರದ ಅನುಮೋದನೆ ಬಂದ ನಂತರ ಕೆರೆ ನಿರ್ಮಾಣ ಕಾರ್ಯಕ್ರಮ ಹಾಕಿಕೊಳ್ಳಲಾಗುವುದು.

ಬೈಂದೂರು ಮತಕ್ಷೇತ್ರದಲ್ಲಿ ಶಾಲಾ ಕಟ್ಟಡಗಳು

881 - ಶ್ರೀ ಐ.ಎಂ. ಜಯರಾಮ್ ಶೆಟ್ಟಿ (ಬೈಂದೂರು) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೈಂದೂರು, ಮತ ಕ್ಷೇತ್ರದಲ್ಲಿ (ಕುಂದಾಪುರ ತಾ: ಶಿಕ್ಷಕರಿಲ್ಲದಂತಹ ಶಾಲೆಗಳ ಸಂಖ್ಯೆ ಎಷ್ಟು?

ಆ) ಸರ್ಕಾರವು ಇಂತಹ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು.

ಇ) ಹೆಚ್ಚುವರಿ ಶಾಲಾ ಕಟ್ಟಡಗಳ ಬಗ್ಗೆ ಅವಶ್ಯಕವಾಗಿರುವ ಶಾಲೆಗಳ ಸಂಖ್ಯೆ ಎಷ್ಟು;

ಈ) ಈ ಹೆಚ್ಚುವರಿ ಶಾಲಾ ಕಟ್ಟಡಗಳನ್ನು ನಿರ್ಮಿಸಲು ಸರ್ಕಾರ ಯಾವಾಗ ಕೈಗೆತ್ತಿಕೊಳ್ಳುವುದು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) 36

ಈ) ಸದ್ಯದಲ್ಲಿ ಇಂತಹ ಕಟ್ಟಡಗಳನ್ನು ನಿರ್ಮಿಸಲಾಗುವುದು.

ಆಸ್ಪತ್ರೆಗಳ ಸಂದರ್ಶಕರ ಸಮಿತಿಯನ್ನು ಪುನರ್ ರಚಿಸುವುದು

883 - ಶ್ರೀ ಆರ್. ಕೃಷ್ಣಪ್ಪ (ಜಯಮಹಲ್) : ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ವಿಕ್ಟೋರಿಯಾ, ಬೌರಿಂಗ್, ಕೆ.ಸಿ.ಜನರಲ್, ಮಿಂಟೋ ಹಾಗೂ ವಾಣಿ ವಿಲಾಸ್ ಆಸ್ಪತ್ರೆಗಳ ಸಂದರ್ಶಕರ ಸಮಿತಿಯನ್ನು ಪುನರ್ ರಚಿಸಲಾಗಿದೆಯೆ?

ಆ) ಇಲ್ಲದಿದ್ದಲ್ಲಿ ಯಾವಾಗ ಈ ಆಸ್ಪತ್ರೆಗಳ ಸಂದರ್ಶಕರ ಸಮಿತಿಗಳನ್ನು ಪುನರ್